## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2039 |
| ಸದಸ್ಯರ ಹೆಸರು | ಶ್ರೀ ಎಂ.ನಾರಾಯಣಸ್ವಾಮಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 27.03.2020 |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ ತಿಮ್ಮಸಂದ್ರ, ಆಲದೇವನಹಳ್ಳಿಯ ಅಕ್ಕಪಕ್ಕ ರೈತರು ವ್ಯವಸಾಯ ಮಾಡಿಕೊಂಡಿದ್ದು, ಸದರಿ ರಸ್ತೆಯು ಅನುಕೂಲ ಇಲ್ಲದಿರುವ ಬಗ್ಗೆ ಕ್ರಮ ಕೈಗೊಳ್ಳಲು ಮಾನ್ಯ ಸಚಿವರು ರಸ್ತೆ ನಿರ್ಮಾಣಕ್ಕಾಗಿ ಆದೇಶ ಕೊಟ್ಟರುವುದು ನಿಜವೇ; ಕೊಟ್ಟಿದಲ್ಲಿ, ಸದರಿ ರಸ್ತೆಯ ನಿರ್ಮಾಣದ ಬಗ್ಗೆ ಸರ್ಕಾರದ ಕೈಗೊಂಡ ಕ್ರಮಗಳೇನು; | ಹೌದು.<br>• ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ ಆಲದೇವನಹಳ್ಳಿಯಿಂದ ಸುಣ್ಣಘಟ್ಟ ಹಳ್ಳಿವರೆಗಿನ 1.5 ಕಿ.ಮೀ ಉದ್ದದ ಮಣ್ಣಿನ ರಸ್ತೆಯನ್ನು<br>• 2018-19ನೇ ಸಾಲಿನ ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಹಾಗೂ<br>• ತಾಲ್ಲೂಕು ಪಂಚಾಯಿತಿಯ ನಿಧಿ-3 ಯೋಜನೆಯಡಿ ಒಟ್ಟು 5.25 ಲಕ್ಷಗಳ ವೆಚ್ಚದಲ್ಲಿ ಸುಮಾರು 1.00ಕಿಮೀ ರಸ್ತೆಯನ್ನು ಜಲ್ಲಿ ಬಿಛಾವಣೆ ಹಾಗೂ<br>• 0.5 ಕಿ.ಮೀ ರಸ್ತೆಯನ್ನು ಗ್ರಾವೆಲ್ ಹರಡಿ ಅಭಿವೃದ್ಧಿಪಡಿಸಲಾಗಿದೆ. |
| ಆ. | ಸದರಿ ಗ್ರಾಮದ ಸರ್ವೆ ನಂ. 62ರ ಸರ್ಕಾರಿ ಜಮೀನಿನ ವಿಸ್ತೀರ್ಣವೆಷ್ಟು; ಈ ಸರ್ಕಾರಿ ಜಮೀನಿನಲ್ಲಿ ರಸ್ತೆಗಾಗಿ ಎಷ್ಟು ವಿಸ್ತೀರ್ಣಗಳನ್ನು ಉಪಯೋಗಿಸಿಕೊಳ್ಳಲಾಗಿದೆ; ಸದರಿ ಗ್ರಾಮ ಆಲದೇವನಹಳ್ಳಿಗೆ ಸೇರಿದ ಸಣ್ಣ ಕೆರೆ. (ವೆಂಕಟನಕುಂಟೆ) ದನ ಕರುಗಳಿಗೆ ನೀರು ಕುಡಿಯಲು ಅನುಕೂಲವಿದ್ದು, ಅಕ್ಕಪಕ್ಕದ ರೈತರಿಗೆ ಕೃಷಿ ಕೆಲಸಗಳಿಗೆ ಸಹ ಅನುಕೂಲವಾಗುವುದರಿಂದ ಕೂಡಲೇ ಸರ್ಕಾರ ಅಭಿವೃದ್ಧಿಪಡಿಸಲು ಕ್ರಮಕೈಗೊಳವುದೇ; | • ದೊಡ್ಡಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿ ತಿಮ್ಮಸಂದ್ರ ಗ್ರಾಮದ ಸರ್ವೆ ನಂ.62ರಲ್ಲಿ ಆರ್.ಟಿ.ಸಿ.ಯಂತೆ 10 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನಿದ್ದು, ಈ ಜಮೀನು ಸರ್ಕಾರಿ ಪಾಳು ಜಮೀನಾಗಿರುತ್ತದೆ ಹಾಗೂ<br>• ತಿಮ್ಮಸಂದ್ರ ಗ್ರಾಮದ ನಕಾಶೆಯಂತೆ 0.04 ಗುಂಟೆ ಪ್ರದೇಶದಲ್ಲಿ ಕಾಲುದಾರಿ ಹಾದುಹೋಗಿದ್ದು, ಇದು ಬಳಕೆಯಲ್ಲಿರುತ್ತದೆ.<br>• ಆಲದೇವನಹಳ್ಳಿಗೆ ಸೇರಿದ ಸಣ್ಣಕೆರೆ (ವೆಂಕಟನ ಕುಂಟೆ)ಯು ದನಕರುಗಳಿಗೆ ನೀರು ಕುಡಿಯಲು ಅನುಕೂಲವಿದ್ದು, ಸದರಿ ಕೆರೆಯನ್ನು 2016-17 ನೇ ಸಾಲಿನ ಸಣ್ಣನೀರಾವರಿ ಇಲಾಖೆಯ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ಲೆಕ್ಕ ಶೀರ್ಷಿಕೆ: 2702 ರ ಅನುದಾನದಲ್ಲಿ ಸದರಿ ಕೆರೆಯನ್ನು ಅಭಿವೃದ್ಧಿ |

| | | |
|---|---|---|
| | | ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ರವರು ವರದಿ ಮಾಡಿರುತ್ತಾರೆ.<br>• 2020-21ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ರೂ.5.00ಲಕ್ಷ (ಐದು ಲಕ್ಷ ಮಾತ್ರ)ಗಳ ಮೊತ್ತದಲ್ಲಿ ಸದರಿ ಕೆರೆ ಅಭಿವೃದ್ದಿಗೆ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. |
| ಇ. | ದಿನಾಂಕ: 08-11-1991ರ RM No. 8/91-92ರ ಪತ್ರ ರಾಜ್ಯಾಘಟ್ಟ ಮಂಡಲ ಪಂಚಾಯಿತಿ ಪ್ರಧಾನರು, ಉಪ-ಪ್ರಧಾನರು ತಹಸೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ಆ ಮನವಿಯ ಪ್ರತಿ ಮತ್ತು ತೆಗದುಕೊಂಡ ಕ್ರಮ ಪ್ರತಿಯನ್ನು ಒದಗಿಸುವುದು | ತಹಶೀಲ್ದಾರ್, ದೊಡ್ಡಬಳ್ಳಾಪುರ ರವರು ಸದರಿ ವಿಷಯದ ಬಗ್ಗೆ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲವೆಂದು ವರದಿ ಮಾಡಿರುವುದಾಗಿ ಡಿ.ಸಿ. ರವರು ತಿಳಿಸಿರುತ್ತಾರೆ. |

ಕಡತ ಸಂಖ್ಯೆ: ಗ್ರಾಅಪ:01/90:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು